ವಾಹನಗಳ ನೋಂದಾವಣೆ

2699 (3250); ಶ್ರೀ ಜಗದೀಶ್ ಕುಮಾರ್ ಆರ್ (ಹೆಬ್ಬಾಳ)

ಅ) ಹೊರ ರಾಜ್ಯದಲ್ಲಿ ನೋಂದಣಿಗೊಂಡು ಪ್ರಸ್ತುತ ರಾಜ್ಯದಲ್ಲಿ ಸಂಚರಿಸುತ್ತಿರುವ ದ್ವಿಚಕ್ರ, ತ್ರಿಚಕ್ರ, ಕಾರುಗಳು, ಬಸ್ಸುಗಳು ಇತ್ಯಾದಿ ವಾಹನಗಳೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಹೊರ ರಾಜ್ಯದಿಂದ ಬಂದು ಈ ರಾಜ್ಯಕ್ಕೆ ವರ್ಗಾವಣೆ ಮಾಡಿಸಿಕೊಳ್ಳಲು ಇರುವ ನಿಯಮವೇನು; (ಮಾಹಿತಿ ಒದಗಿಸುವುದು)

ಇ) ಸದರಿ ಪ್ರಕರಣಗಳಲ್ಲಿ ವಸೂಲಿಯಾದ ತೆರಿಗೆ ಹಾಗೂ ದಂಡವೆಷ್ಟು?

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ) ಹೊರ ರಾಜ್ಯದಲ್ಲಿ ನೋಂದಣಿಗೊಂಡು ಪ್ರಸ್ತುತ ರಾಜ್ಯದಲ್ಲಿ ಸಂಚರಿಸುತ್ತಿರುವ ದ್ವಿಚಕ್ರ, ತ್ರಿಚಕ್ರ, ಕಾರುಗಳು, ಬಸ್ಸುಗಳು ಇತ್ಯಾದಿ ವಾಹನಗಳ ವಿವರಗಳನ್ನು **ಅನುಬಂಧ**ದಲ್ಲಿ ನೀಡಲಾಗಿದೆ.

ಆ) ಮೋಟಾರು ವಾಹನ ಕಾಯ್ದೆ 1988ರ, ಕಲಂ 47 ರಿಂದ 50 ರವರೆಗೆ ಮತ್ತು ಕೇಂದ್ರ ಮೋಟಾರು ವಾಹನ ನಿಯಮಾವಳಿ 1989ರ, ನಿಯಮ 54 ರಿಂದ 55ರಲ್ಲಿ ನಿಗಧಿಪಡಿಸಿರುವಂತೆ ಯಾವುದೇ ಒಂದು ರಾಜ್ಯದಲ್ಲಿ ನೋಂದಾಯಿತವಾದ ವಾಹನವನ್ನು ಇನ್ನೊಂದು ರಾಜ್ಯದಲ್ಲಿ 30 ದಿನಗಳ ನಂತರ ಆಚರಣೆ ಮಾಡಬೇಕಾದಲ್ಲಿ, ಸಂಬಂಧಪಟ್ಟ ವ್ಯಾಪ್ತಿಯ ನೋಂದಣಿ ಪ್ರಾಧಿಕಾರಕ್ಕೆ ವಿಳಾಸ ಬದಲಾವಣೆ ಬಗ್ಗೆ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿ ವಿಳಾಸ ಬದಲಾವಣೆ ಮಾಡಿಕೊಳ್ಳಬೇಕು, ಹಾಗೂ ನಿಯಮಾನುಸಾರ ಆ ರಾಜ್ಯದ ರಸ್ತೆ ತೆರಿಗೆಯನ್ನು ಪಾವತಿಸಬೇಕು ಹಾಗೂ 12 ತಿಂಗಳ ಅವಧಿ ಮೀರಿ ಇನ್ನೊಂದು ರಾಜ್ಯದಲ್ಲಿ ವಾಹನವನ್ನು ಇರಿಸಿಕೊಂಡಲ್ಲಿ ಆ ರಾಜ್ಯದ ಸಂಬಂಧಪಟ್ಟ ವ್ಯಾಪ್ತಿಯ ಪ್ರಾದೇಶಿಕ/ ಸಹಾಯಕ ಪ್ರಾದೇಶಿಕ ಸಾರಿಗೆ

ಕಛೇರಿಯಲ್ಲಿ ನಿಯಮಾನುಸಾರ ವಾಹನಕ್ಕೆ ಮರು ನೋಂದಣಿ ಮಾಡಿ ಆ ರಾಜ್ಯದ ನೋಂದಣಿ ಸಂಖ್ಯೆಯನ್ನು ಪಡೆದುಕೊಳ್ಳಬೇಕಾಗುತ್ತದೆ.

ಇ) ವಿಶೇಷ ತನಿಖಾ ತಂಡಗಳ ಮೂಲಕ ಪ್ರಸ್ತುತ ಸಾಲಿನಲ್ಲಿ ತೀವ್ರವಾಗಿ ತಪಾಸಣೆ ಕೈಗೊಂಡು, ಒಟ್ಟು **81515** ವಾಹನಗಳನ್ನು ತಪಾಸಣೆ ಮಾಡಿ, **5609** ವಾಹನಗಳ ಮೇಲೆ ಪ್ರಕರಣಗಳನ್ನು ದಾಖಲಿಸಿ, **1226** ವಾಹನಗಳನ್ನು ವಶಕ್ಕೆ ಪಡೆಯಲಾಗಿದೆ ಇವುಗಳಿಂದ **₹ 20,66,23,602/–** ತೆರಿಗೆ ಹಾಗೂ **₹ 28,26,524/–** ಗಳ ದಂಡ ವಸೂಲು ಮಾಡಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 3250 ರ ಅನುಬಂಧ

ಹೊರ ರಾಜ್ಯದಲ್ಲಿ ನೋಂದಣಿಗೊಂಡು ಪ್ರಸ್ತುತ ರಾಜ್ಯದಲ್ಲಿ ಸಂಚರಿಸುತ್ತಿರುವ ವಾಹನಗಳ ವಿವರ.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ದ್ವಿಚಕ್ರ	ತ್ರಿಚಕ್ರ	ಕಾರುಗಳು	ಬಸ್ಸುಗಳು	ಇತ್ಯಾದಿ ವಾಹನಗಳು
1	ಬೆಂಗಳೂರು ನಗರ	4068	346	5161	170	5737
2	ಬೆಂಗಳೂರು ಗ್ರಾಮಾಂತರ	37	0	76	0	374
3	ರಾಮನಗರ	17	0	74	0	362
4	ತುಮಕೂರು	30	3	9	9	219
5	ಕೋಲಾರ	186	77	92	10	829
6	ಚಿಕ್ಕಬಳ್ಳಾಪುರ	8	0	16	445	478
7	ಮೈಸೂರು	6	0	744	1029	173
8	ಮಂಡ್ಯ	276	185	143	717	28
9	ಮಡಿಕೇರಿ	9	0	11	27	1
10	ಹಾಸನ	13	4	10	1	58
11	ಚಾಮರಾಜನಗರ	56	154	133	21	260
12	ಶಿವಮೊಗ್ಗ	93	0	135	11	179
13	ಚಿತ್ರದುರ್ಗ	0	0	0	3	176
14	ದಾವಣಗೆರೆ	262	379	378	0	562
15	ಚಿಕ್ಕಮಗಳೂರು	32	3	105	3	15
16	ಮಂಗಳೂರು	28	2	103	1	0
17	ಉಡುಪಿ	0	0	0	114	0
18	ಪುತ್ತೂರ	0	0	4	1	23
19	ಬೆಳಗಾಂ	949	5	2256	0	0
20	ಚಿಕ್ಕೋಡಿ	169	7	1536	3	0
21	ಗೋಕಾಕ್	1425	0	349	0	0
22	ಧಾರವಾಡ	920	12	456	0	0
23	ಗದಗ	11	0	36	0	0
24	ಹಾವೇರಿ	430	151	418	0	0
25	ಬಿಜಾಪುರ	0	0	0	3	0
26	ಬಾಗಲಕೋಟೆ	1788	0	319	0	0
27	ಕಾರವಾರ	116	1	105	340	0
28	ಗುಲ್ಬರ್ಗಾ	0	0	0	0	0
29	ಬಳ್ಳಾರಿ	0	0	0	0	0
30	ಹೊಸಪೇಟೆ	0	0	0	0	0
31	ರಾಯಚೂರು	0	0	0	0	0
32	ಕೊಪ್ಪಳ	0	0	0	0	0
33	ಬೀದರ್	0	0	0	0	0
34	ಯಾದಗಿರಿ	0	0	0	0	0
	ಒಟ್ಟು	10929	1329	12669	2908	9474